ಇತರ ಆರೋಗ್ಯ ಸಮಸ್ಯೆಗಳಿಂದಲೂ ಬಳಲುತ್ತಿದ್ದರು. ಈ ಹಿಂದೆ ಅವರು ತಮ್ಮ ಹೃದಯ, ಬೆನ್ನುಮೂಳೆ ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದರು, ಇಷ್ಟೆಲ್ಲಾ ಆರೋಗ್ಯ ಸಮಸ್ಯೆ ಹೊಂದಿರುವ ಪ್ರಕಾಶ್ ಅವರ ಕುತ್ತಿಗೆಯೂ ಸೇರಿದಂತೆ ಇಡೀ ದೇಹವೇ ನಡುಕ ಉಂಟು ಮಾಡುವ ಪಾರ್ಕಿನ್ಸನ್ ಕಾಯಿಲೆಯು ಅವರನ್ನು ಸಂಪೂರ್ಣ ನಲುಗಿಸಿತ್ತು, ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನದ ಮೂಲಕ ನೀಡಿರುವ ಚಿಕಿತ್ಸೆ ಯಶಸ್ವಿಯಾಗಿದ್ದು ರೋಗಿಯ ಮುಖದಲ್ಲಿ ಮಂದಹಾಸ ಮಿನುಗುವಂತಾಗಿದೆ.

## ಏನಿದು ಪಾರ್ಕಿನ್ಸನ್?

ಪಾರ್ಕಿನ್ಸನ್ ಎನ್ನುವುದು ನರಮಂಡಲದಲ್ಲಿ ಉಂಟಾಗುವ ಒಂದು ರೀತಿಯ ಸಮಸ್ಯೆ. ಮೆದುಳಿನಲ್ಲಿನ ನರ ವ್ಯವಸ್ಥೆಯಲ್ಲಿ ಏರಿಳಿತವಾಗುವ ಸಮಸ್ಯೆ ಇದಾಗಿದ್ದು, ದೇಹದ ಚಲನೆಗೆ ಸಂಬಂಧಿಸಿದ ತೊಂದರೆಯೂ ಆಗಿದೆ. 'ಶೇಕಿಂಗ್ ಪಾಲ್ಸಿ' ಎಂಬುದು ಇದರ ಇನ್ನೊಂದು ಹೆಸರು.

'ಮೆದುಳಿನ ನರಕೋಶಗಳಲ್ಲಿ ಬಿಡುಗಡೆಯಾಗುವ ಡೊಪಮಿನ್ ಎಂಬ ರಾಸಾಯನಿಕ ಬಿಡುಗಡೆಯಾಗದೇ ಇದ್ದಾಗ ಪಾರ್ಕಿನ್ಸನ್ ಉಂಟಾಗುತ್ತದೆ. ಈ ಕಾಯಿಲೆ ಬಂದವರಲ್ಲಿ ಪ್ರಮುಖವಾಗಿ ಕೈಕಾಲುಗಳಲ್ಲಿ ಹೆಚ್ಚು ನಡುಕ, ತಲೆಯಲ್ಲಿ ನಡುಕ, ಸ್ನಾಯುಗಳ ಬಿಗಿತ, ಚಲನೆಯ ನಿಧಾನತೆ, ಖಿನ್ನತೆ ಮತ್ತು ಭಾವನಾತ್ಮಕ ಬದಲಾವಣೆಗಳು, ಆಹಾರ ಜಗಿಯಲು ನುಂಗಲು ಮತ್ತು ಮಾತನಾಡಲು ತೊಂದರೆ, ಮೂತ್ರದ ತೊಂದರೆ, ಮಲಬದ್ಧತೆ, ಚರ್ಮದಲ್ಲಿ ಸಮಸ್ಯೆ, ಭ್ರಮೆ, ತಲೆ ತಿರುಗಿ ಬೀಳುವುದು ಸೇರಿದಂತೆ ಅನೇಕ ಸಮಸ್ಯೆಗಳು ಬರುತ್ತವೆ' ಎಂದು ಹೇಳುತ್ತಾರೆ ಈ ವೈದ್ಯರು.

'ಹಾಗೆಂದು ಮೆದುಳಿನಲ್ಲಿ ಡೊಪಮಿನ್ ರಾಸಾಯನಿಕ ಬಿಡುಗಡೆಯಾಗದೇ ಇರುವುದಕ್ಕೆ ನಿಖರ ಕಾರಣಗಳು ಇನ್ನೂ ತಿಳಿದಿಲ್ಲ. ಈ ಬಗ್ಗೆ ಅಧ್ಯಯನಗಳು ನಡೆಯುತ್ತಲೇ ಇವೆ' ಎನ್ನುವ ಡಾ. ರಘುರಾಮ್, ಕೆಲವರಿಗೆ ಕುಟುಂಬದಲ್ಲಿ ಈ ಮೊದಲೇ ಪಾರ್ಕಿನ್ಸನ್ ಸಮಸ್ಯೆ ಇದ್ದರೆ, ಅದರಿಂದಲೂ ಬರುವ ಸಾಧ್ಯತೆಗಳು ಇವೆ' ಎಂದು ಹೇಳುತ್ತಾರೆ.

'ಸಾಮಾನ್ಯವಾಗಿ 65ರಿಂದ 70 ವರ್ಷ ಮೇಲ್ಪಟ್ಟವರಲ್ಲಿ ಪಾರ್ಕಿನ್ಸನ್ ಕಾಣಿಸಿಕೊಳ್ಳುತ್ತದೆ. ವಯಸ್ಸಾದ ಬಳಿಕ ಸಾಕಷ್ಟು ಜನರ ಕೈಕಾಲುಗಳಲ್ಲಿ ನಡುಕ ಉಂಟಾಗಿ ಯಾವುದೇ ವಸ್ತು ಹಿಡಿದರೂ ಅದು ನಡುಗುತ್ತಲೇ ಇರುತ್ತದೆ. ಇತ್ತೀಚೆಗೆ 45ರಿಂದ 50 ವರ್ಷದವರಲ್ಲಿಯೂ ಈ ಕಾಯಿಲೆ ಕಂಡುಬರುತ್ತಿರುವುದು ಆತಂಕ ಮೂಡಿಸಿದೆ, ಇಂತಹ ಪ್ರಕರಣಗಳಲ್ಲಿ ಕುಟುಂಬ ಇತಿಹಾಸ ಇರುವುದೂ ಕಂಡುಬರುತ್ತಿದೆ' ಎಂಬುದು ವೈದ್ಯರು ನೀಡುವ ವಿವರಣೆ.

ಸದ್ಯ ಭಾರತದಲ್ಲಿ ಒಂದು ಲಕ್ಷ ಜನರಲ್ಲಿ 300– 400 ಜನರಿಗೆ ಪಾರ್ಕಿನ್ಸನ್ ರೋಗ ಕಾಣಿಸಿಕೊಳ್ಳುತ್ತಿದೆ. 2030ರ ಹೊತ್ತಿಗೆ ಈ ಸಂಖ್ಯೆ ದುಪ್ಪಟ್ಟುಗೊಳ್ಳುವ ಅಪಾಯ ಇದೆ. ಇದು ಸೋಂಕುರಹಿತವಾಗಿದ್ದು, ಹಂತ ಹಂತವಾಗಿ ರೋಗಿಯ ದೇಹದ ಭಾಗಗಳಿಗೆ ತೊಂದರೆ ಉಂಟು ಮಾಡುವ ಕಾಯಿಲೆ. ಬಹುತೇಕ ರೋಗಿಗಳು 50 ವರ್ಷ ಮೇಲ್ಪಟ್ಟವರಾದರೂ, ಯಾವ ವಯೋಮಾನದವರಲ್ಲಾದರೂ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂಬುದು ವೈದ್ಯರ ಲೆಕ್ಕಾಚಾರ.

## ಪತ್ತೆ, ಪರೀಕ್ಷೆ ಹೇಗೆ?

ಪಾರ್ಕಿನ್ಸನ್ ಬಂದಿದೆ ಎಂದು ಶಂಕಿಸಲಾದ ರೋಗಿಗಳಿಗೆ ಡೊಪಮಿನ್ ಇಮೇಜಿಂಗ್ ಎಂಬ ಒಂದು ಪರೀಕ್ಷೆ ಮಾಡಲಾಗುತ್ತದೆ. ಇದರಿಂದ ರೋಗದ ಆರಂಭಿಕ ಹಂತವನ್ನು ಪರಿಣಾಮಕಾರಿ ಪತ್ತೆ ಹಚ್ಚಬಹುದು. ಸಾಮಾನ್ಯವಾಗಿ ಪಾರ್ಕಿನ್ಸನ್ ಬಂದಿರುವ ರೋಗಿಗಳ ದೇಹದಲ್ಲಿ ಡೊಪಮಿನ್ ಎಂಬ ರಾಸಾಯನಿಕ ಗಮನಾರ್ಹವಾಗಿ ಕಡಿಮೆಯಾಗಿರುತ್ತದೆ. ಔಷಧಿ, ಇಂಜೆಕ್ಷನ್ ಮತ್ತು ಕೆಲವೊಮ್ಮೆ ಶಸ್ತ್ರಚಿಕಿತ್ಸೆ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

## ಚಿಕಿತ್ಸೆ ಇದೆ...

'ಮೊದಲೆಲ್ಲಾ ಪಾರ್ಕಿನ್ಸನ್ ಸಮಸ್ಯೆಗೆ ಚಿಕಿತ್ಸೆ ಲಭ್ಯವಿರಲಿಲ್ಲ. ಕೈ ನಡುಕವನ್ನು ಸರಿ ಮಾಡುವ ಅಥವಾ ನಿಯಂತ್ರಣಕ್ಕೆ ತರಲು ಒಂದಷ್ಟು ಔಷಧಿಗಳನ್ನು ನೀಡಲಾಗುತ್ತಿತ್ತು, ಆದರೆ ಈಗ ಬಂದಿರುವ ಅತ್ಯಾಧುನಿಕ ಚಿಕಿತ್ಸೆಯಾದ 'ಡೀಪ್ ಬ್ರೈನ್ ಸ್ಟಿಮುಲೇಶನ್' (DBS) ಚಿಕಿತ್ಸೆಯಿಂದ ರೋಗಿಗಳಲ್ಲಿ ಬದುಕುವ ಆಶಾಭಾವನೆ ಮೂಡಿದಂತಾಗಿದೆ' ಎಂಬುದು ವೈದ್ಯರ ನುಡಿ.

'ನ್ಯೂರೊಸ್ಮಾರ್ಟ್ ಪೋರ್ಟಬಲ್ ಮೈಕ್ರೊ ಎಲೆಕ್ಟ್ರೋಡ್ ರೆಕಾರ್ಡಿಂಗ್ (MER) ಎಂಬ ಅತ್ಯಾಧುನಿಕ ಸಾಧನವನ್ನು ಬಳಸಿಕೊಂಡು ಡೀಪ್ ಬ್ರೈನ್ ಸ್ಟಿಮುಲೇಶನ್ (DBS) ಚಿಕಿತ್ಸೆ ನೀಡಲಾಗುತ್ತದೆ. ಈ ತಂತ್ರಜ್ಞಾನದ ಮೂಲಕ ಮೆದುಳಿನಲ್ಲಿ ಆಗುವ ಸಮಸ್ಯೆಗಳನ್ನು ಸೂಕ್ಷ್ಮರೀತಿಯಲ್ಲಿ ವಿಶ್ಲೇಷಣೆ ಮಾಡಿ, ಅದಕ್ಕೆ ಸೂಕ್ತ ರೀತಿಯ ಚಿಕಿತ್ಸೆ ನೀಡಲು ಸಹಕಾರಿಯಾಗಿದೆ. ಈ ನೂತನ ತಂತ್ರಜ್ಞಾನವಾದ ನ್ಯೂರೊಸ್ಮಾರ್ಟ್‌ನಲ್ಲಿ ಕೃತಕ ಬುದ್ಧಿಮತ್ತೆ ಬಳಸಿಕೊಂಡು, ರೋಗಿಯು ಎಚ್ಚರವಾಗಿರುವಂತೆ ನೋಡಿಕೊಂಡೇ ಈ ಚಿಕಿತ್ಸೆ ನೀಡಲಾಗುತ್ತದೆ.

## ಖ್ಯಾತನಾಮರನ್ನು ಕಾಡಿದ ಪಾರ್ಕಿನ್ಸನ್

ಹಲವಾರು ದಶಕಗಳ ಹಿಂದೆ ಪಾರ್ಕಿನ್ಸನ್ ಎಂಬ ವಿಜ್ಞಾನಿ ಈ ರೋಗದ ಲಕ್ಷಣಗಳನ್ನು ಕಂಡುಹಿಡಿದು ವೈದ್ಯ ಜಗತ್ತಿಗೆ ತೋರಿಸಿಕೊಟ್ಟ. ಇದಕ್ಕೆ 'ನಡುಗುವ ಲಕ್ವ' (shaking palsy) ಎಂದೂ ಹೆಸರಿಟ್ಟದ್ದು ಇದೇ ವಿಜ್ಞಾನಿ.

ಜಗತ್ತಿನ ಹಲವು ಖ್ಯಾತನಾಮರಿಗೆ ಪಾರ್ಕಿನ್ಸನ್ ಇದ್ದ ಬಗ್ಗೆ ಮಾಹಿತಿ ಲಭ್ಯವಿದೆ. ಅಮೆರಿಕದ ಖ್ಯಾತ ಗಾಯಕ, ಗೀತರಚನೆಕಾರ ಹಾಗೂ ನಟ ನೀಲ್ ಡೈಮಂಡ್, ಅಮೆರಿಕದ ಮಾಜಿ ಅಧ್ಯಕ್ಷ ಜಾರ್ಜ್ ಬುಷ್, ಅಮೆರಿಕ–ಕೆನಡಾದ ನಟ ಮೈಕಲ್ ಜೆ. ಫಾಕ್ಸ್, ರೋಮ್‌ನ ಬಿಷಪ್ ಪೋಪ್ ಜಾನ್ 2, ಸ್ಕಾಟ್ಲೆಂಡ್‌ನ ಹಾಸ್ಯಗಾರ ಬಿಲ್ಲಿ ಕನ್ನೋಲಿ... ಅಲ್ಲದೆ ವಿಶ್ವವಿಖ್ಯಾತ ಬಾಕ್ಸಿಂಗ್‌ಪಟು ಅಮೆರಿಕದ ಮೊಹಮ್ಮದ್ ಅಲಿ ಮುಂತಾದವರು ಪಾರ್ಕಿನ್ಸನ್‌ಗೆ ತುತ್ತಾಗಿದ್ದರು.

